**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>**

ಸಿ.ಸಿ.ನಂಃ 228/2018 ಸಿ.ಡಬ್ಲ್ಯೂ–೮ ಪಿ.ಡಬ್ಲ್ಯೂ-೪

| | | |
|---|---|---|
| ಹೆಸರು | ಃ | ಹಣಮಂತ |
| ತಂದೆಃ ಗಂಡ | ಃ | ಅಣ್ಣಪ್ಪ |
| ವಯಸ್ಸು | ಃ | ೨೮ ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | ಃ | ಕೊರಳ್ಳಿ |

ದಿನಾಂಕಃ೧೦.೦೧.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ</u>**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 7 ಮತ್ತು 9 ರಿಂದ 15 ರವರ ಪರಿಚಯ ಇರುತ್ತದೆ. ಚಾಸಾ-1 ನನ್ನ ತಂದೆ, ಚಾಸಾ-6 ನನ್ನ ತಾಯಿ, ಚಾಸಾ-7 ನನ್ನ ಚಿಕ್ಕಪ್ಪ.

ದಿ. 29.10.2017 ರಂದು ಸಾಯಂಕಾಲ 6.00 ಗಂಟೆಗೆ ನನ್ನ ತಾಯಿಗೆ ಆರಾಮ ಇಲ್ಲದ ಕಾರಣ ಅವರನ್ನು ಕರೆದುಕೊಂಡು ಆಸ್ಪತ್ರೆಗೆ ತಮ್ಮ ಮೋಟರ ಸೈಕಲನಲ್ಲಿ ಹೊರಟಿದ್ದು, ಭೂಸನೂರ ಫ್ಯಾಕ್ಟರಿ ದಾಟಿ ಕೊತಲಿ ಗುಂಡಪ್ಪ ಅನ್ನುವವರ ಹೊಲದ ಹತ್ತಿರ ಆರೋಪಿ ಜೀಪ ನಂ. ಎಂ.ಹೆಚ್.12-ಬಿಜಿ-7085 ನ್ನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಬಂದು ಅಪಘಾತಪಡಿಸಿ ಅಷ್ಟೇ ಅಲ್ಲದೇ ಅಪಘಾತ ಸ್ಥಳದಿಂದ ಪರಾರಿಯಾಗಿರುತ್ತಾನೆ. ಸದರಿ ಅಪಘಾತ ವಿಷಯ ಗೊತ್ತಾದ ನಂತರ ಚಾಸಾ-12 ರಿಂದ 14 ರವರು ಖಾಸಗಿ ಜೀಪಿನಲ್ಲಿ ನನ್ನ ತಂದೆ ತಾಯಿಯವರನ್ನು ತೆಗೆದುಕೊಂಡು ಬಂದು ಕಲಬುರಗಿಯ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ತೀವ್ರ ಸ್ವರೂಪದ ಗಾಯಗಳು ಆಗಿರುವ ಕಾರಣ ಅವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಬಾಬಾ ಹೌಸ್ ಆಸ್ಪತ್ರೆಗೆ ಕಲಬುರಗಿಗೆ ದಾಖಲಿಸಿದೆವು. ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ನಾನು ಮತ್ತು ನನ್ನ ಸಹೋದರ ನಮ್ಮ ತಂದೆಯನ್ನು ದಾಖಲಿಸಿದೆವು. ಅಲ್ಲಿಯೂ ಸಹ ಕೂಡ ಚಿಕಿತ್ಸೆ ಫಲಕಾರಿ ಆಗದೆ ದಿ. 01.11.2017 ರಂದು ಬೆಳಿಗ್ಗೆ ಮೃತರಾಗಿರುತ್ತಾರೆ. ನನ್ನ ತಂದೆಯವರು ಮೃತರಾದ ನಂತರ ಗುಲಬರ್ಗಾದ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ಪಿ.ಎಂ.ರಿಪೋರ್ಟನ್ನು ಮಾಡಿಸಿದೆವು.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಎಸ್.ಓ.ಎಂ. ವಕೀಲರಿಂದ</u>**

ಘಟನೆ ನನಗೆ ಹೇಳಿದ ನಂತರ ಗೊತ್ತಾಗಿರುತ್ತದೆ. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಎಂಧರೆ ಸರಿ. ನಾನು ಪ್ರತ್ಯಕ್ಷವಾಗಿ ನೋಡದೇ ಇರದ ಕಾರಣ ಯಾರು ಹೇಗೆ, ವಾಹನವನ್ನು ಚಲಾಯಿಸುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಸಿ.ಸಿ. ಕ್ಯಾಮೆರಾದಲ್ಲಿ ರೆಕಾರ್ಡ ಆಗಿರುತ್ತದೆ ಅವು ಪೆಟ್ರೋಲ ಬಂಕ್ ಮತ್ತು ವೈನಶಾಪಿನಲ್ಲಿ ಸಿ.ಸಿ. ಕ್ಯಾಮೆರಾದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ, ಸಾಕ್ಷಿಯು ಹೇಳಿರುವುದಿಲ್ಲ ಈಗ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಇದೇ ಮೊದಲ ಬಾರಿಗೆ ನಾನು ಹೇಳುತ್ತಿದ್ದೇನೆ ಎಂಧರೆ, ಸಾಕ್ಷಿಯು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಘಟನೆ ನಡೆದ ವಿಷಯವು

ನನಗೆ ಕರೆ ಮಾಡಿ ಹೇಳಿದಾಗ ಗೊತ್ತಾಯಿತು ನಾನು ಹೋಗಿ ನೋಡಿರುತ್ತೇನೆ, ನನಗೆ ಚಾಸಾ-೧೩ ರವರು ಕರೆ ಮಾಡಿ ತಿಳಿಸಿರುತ್ತಾರೆ. ನಾನು ಘಟನೆ ನಡೆದ ದಿನದಂದೇ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿಯೇ ನನ್ನ ತಂದೆ ತಾಯಿಯರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂಧರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋದಾಗ ನನ್ನ ತಂದೆ ತಾಯಿ, ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂಧರೆ ಸರಿ, ಸಾಕ್ಷಿ ಮುಂದುವರೆದು ಅಲ್ಲಿ ಸಾಕಷ್ಟು ಜನರು ಇದ್ದರು ಎಂದು ನುಡಿಯುತ್ತಾರೆ. ಅಲ್ಲಿ ಯಾರು ಯಾರು ಕೂಡಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಗೆ ಸೀರಿಯಸ್ ಇದ್ದ ಕಾರಣ ಅದರ ಬಗ್ಗೆ ಲಕ್ಷ ಕೊಡಲಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಯವರಿಗೆ ಚಾಲನಾ ಪರವಾನಿಗೆ ಪತ್ರ ಮತ್ತು ಅವರು ಚಾಲನೆ ಮಾಡುತ್ತಿದ್ದ ಮೋಟರ ಸೈಕಲಗೆ ಎಲ್ಲಾ ದಾಖಲಾತಿಗಳು ಇದ್ದವು. ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಗಳನ್ನು ಆಸ್ಪತ್ರೆಗೆ ಒಯ್ದು ನಂತರದ ವಿಷಯ ಮಾತ್ರ ನನಗೆ ಗೊತ್ತು, ಮೊದಲಿನ ವಿಷಯ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಕೇಳಿ ತಿಳಿದಿರುತ್ತೇನೆ ಎಂದು ನುಡಿಯುತ್ತಾರೆ. ಬಸವೇಶ್ವರ ಆಸ್ಪತ್ರೆಯಲ್ಲಿ ಅರ್ಧ ಗಂಟೆ ಇದ್ದು ಬಾಬಾ ಹೌಸಿಗೆ ಹೋಗಿರುತ್ತೇವೆ. ಬಾಬಾ ಹೌಸ್ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದುಕೊಂಡು ನಂತರ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿರುತ್ತೇವೆ. ಘಟನಾ ನಡೆದ ಸ್ಥಳದ ಬಳಿ ಯಾರ ಪೆಟ್ರೋಲ್ ಬಂಕ್, ಯಾರ ಮನೆ, ಯಾರ ಸರಾಯಿ ಅಂಗಡಿ ಇದೆ ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಆ ರಸ್ತೆಯಲ್ಲಿ ಭೂಸನೂರ ಫ್ಯಾಕ್ಟರಿಗೆ ಹೋಗುವ ಸಾಕಷ್ಟು ಗಾಡಿಗಳು ಬರುತ್ತವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ನಮ್ಮ ತಂಧೆಯವರು ವಾಹನವನ್ನು ಓಡಿಸಲಿ ಅಥವಾ ಇನ್ನಿತರರು ವಾಹನವನ್ನು ಓಡಿಸಲಿ ನಿಧಾನವಾಗಿ ಓಡಿಸುತ್ತಾರೆ ಎಂದರೆ ಸಾಕ್ಷಿಯು ಅವರವರ ವಿವೇಚನಗೆ ತಕ್ಕಂತೆ ಓಡಿಸುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಈತನೇ ಎಂದು ನನಗೆ ಗೊತ್ತಿಲ್ಲ ಎಂಧರೆ ನನಗೆ ಪೋಲಿಸರ ವರದಿಯ ಆಧಾರದ ಮೇಲೆ ಗೊತ್ತಾಗುತ್ತದೆ ಎಂದರೆ, ಸಾಕ್ಷಿಯು ಆರೋಪಿಯೇ ದಿನಾಲು ಸದರಿ ಜೀಪನ್ನು ಓಡಿಸುತ್ತಾನೆ ಎಂದು ನುಡಿಯುತ್ತಾರೆ. ಸದರಿ ಜೀಪಿನ ಮಾಲೀಕ ಯಾರು ಎಂದು ನಾನು ನೋಡಿರುವುದಿಲ್ಲ. ನನ್ನ ತಂದೆಯವರು ಓಡಿಸುತ್ತಿದ್ದ ಮೋಟರ್ ಸೈಕಲ್ ನಂ, ಕೆ.ಎ ೩೨-ಇಎಲ್-೦೫೩೪ ಇರುತ್ತದೆ. ಘಟನಾ ಸ್ಥಳದಿಂದ ಫ್ಯಾಕ್ಟರಿ ಸುಮಾರು ಅರ್ಧ ಕಿ.ಮೀ. ಮಾತ್ರ ಇದೆ. ಆರೋಪಿಗೂ ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ.

ದಿ. 29.10.2017 ರಂದು ಸಾಯಂಕಾಲ 6.00 ಗಂಟೆಗೆ ನನ್ನ ತಾಯಿಗೆ ಆರಾಮ ಇಲ್ಲದ ಕಾರಣ ಅವರನ್ನು ಕರೆದುಕೊಂಡು ಆಸ್ಪತ್ರೆಗೆ ತಮ್ಮ ಮೋಟರ ಸೈಕಲನಲ್ಲಿ ಹೊರಟಿದ್ದು, ಭೂಸನೂರ ಫ್ಯಾಕ್ಟರಿ ದಾಟಿ ಕೊತಲಿ ಗುಂಡಪ್ಪ ಅನ್ನುವವರ ಹೊಲದ ಹತ್ತಿರ ಆರೋಪಿ ಜೀಪ ನಂ. ಎಂ.ಹೆಚ್.12-ಬಿಜಿ-7085 ನ್ನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಬಂದು ಅಪಘಾತಪಡಿಸಿ ಅಷ್ಟೇ ಅಲ್ಲದೇ ಅಪಘಾತ ಸ್ಥಳದಿಂದ ಪರಾರಿಯಾಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಸದರಿ ಅಪಘಾತ ವಿಷಯ ಗೊತ್ತಾದ ನಂತರ ಚಾಸಾ-12 ರಿಂದ 14 ರವರು ಖಾಸಗಿ ಜೀಪಿನಲ್ಲಿ ನನ್ನ ತಂದೆ ತಾಯಿಯವರನ್ನು ತೆಗೆದುಕೊಂಡು ಬಂದು ಕಲಬುರಗಿಯ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ತೀವ್ರ ಸ್ವರೂಪದ ಗಾಯಗಳು ಆಗಿರುವ ಕಾರಣ ಅವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಬಾಬಾ ಹೌಸ್ ಆಸ್ಪತ್ರೆಗೆ ಕಲಬುರಗಿಗೆ ದಾಖಲಿಸಿದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ನಾನು ಮತ್ತು ನನ್ನ ಸಹೋದರ ನಮ್ಮ ತಂದೆಯನ್ನು ದಾಖಲಿಸಿದೆವು ಎಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನನ್ನ ತಂದೆಯವರು ಮೃತರಾದ ನಂತರ ಗುಲಬರ್ಗಾದ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ಪಿ.ಎಂ.ರಿಪೋರ್ಟನ್ನು ಮಾಡಿಸಿದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ